<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಜಮಖಂಡಿ.</u>

<u>ಸಿ.ಸಿ.ನಂ.**302/2025**</u>

ಫಿರ್ಯಾದುದಾರರು ವಿರುದ್ಧ ಆರೋಪಿ

ಕಾಂಚನಾ ಗಂಡ ಅರ್ಜುನ ಕಲ್ಯಾಣಿ ಪ್ರಮಿಳಾದೇವಿ ಗಂಡ ಮಾರುತಿ ಮಳಿಗೆ

| | |
|---|---|
| ಆರೋಪಿಯ ಹೆಸರು | ಪ್ರಮಿಳಾದೇವಿ ಮಳಿಗೆ |
| ಗಂಡನ ಹೆಸರು | ಮಾರುತಿ |
| ವಯಸ್ಸು | 59 ವರ್ಷ |
| ಉದ್ಯೋಗ | ಶಿಕ್ಷಕಿ |
| ವಾಸಸ್ಥಳ | ಮಧುರಖಂಡಿ, ತಾಃ ಜಮಖಂಡಿ |

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ.**313** ರ ಅಡಿಯಲ್ಲಿ ಆರೋಪಿಯ ಹೇಳಿಕೆ</u>

ಪ್ರಶ್ನೆ 1: ನೀವು ಫಿರ್ಯಾದುದಾರರ ಪರವಾಗಿ ನೀಡಿರುವ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ ?

ಉತ್ತರಃ- ಕೇಳಿದ್ದೇನೆ.

ಪ್ರಶ್ನೆ 2: ಪ್ರಾಸಾ-1) ಕಾಂಚನಾ ಗಂಡ ಅರ್ಜುನ ಕಲ್ಯಾಣಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, 2018 ರಿಂದ 2019 ರವರೆಗೆ ಆರೋಪಿಯಾದ ನೀವು ನಿಮ್ಮ ಕುಟುಂಬದ ಅವಶ್ಯಕತೆಗಳಿಗಾಗಿ ಮತ್ತು ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಫಿರ್ಯಾದುದಾರರಿಂದ ರೂ.7,00,000/- (ರೂಪಾಯಿ ಏಳು ಲಕ್ಷ ಮಾತ್ರ) ಹಣ ಕೈಸಾಲವಾಗಿ ಪಡೆದಿರುತ್ತೀರಿ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ- ಸುಳ್ಳು

ಪ್ರಶ್ನೆ 3: ಪ್ರಾಸಾ-1) ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ಆರೋಪಿಯಾದ ನೀವು ಸದರಿ ಮೊತ್ತದ ಹಣದ ಮರುಪಾವತಿಗಾಗಿ ನಿಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಶಾಖೆ ಜಮಖಂಡಿ ಬ್ಯಾಂಕಿನ ಚೆಕ್ ನಂ.233256 ನ್ನು ರೂ.7,00,000/- ಮೊತ್ತಕ್ಕೆ ದಿನಾಂಕ 03.02.2023 ನ್ನು ನಮೂದಿಸಿ ಕೊಟ್ಟಿರುತ್ತೀರಾ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ- ಸುಳ್ಳು

ಪ್ರಶ್ನೆ 4: ಪ್ರಾಸಾ-1) ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ನೀವು ನೀಡಿರುವ ಚೆಕ್ಕನ್ನು ನಗದೀಕರಣಕ್ಕಾಗಿ ತನ್ನ ಖಾತೆ ಇರುವ ಕರ್ನಾಟಕ ಬ್ಯಾಂಕ್ ಲಿ., ಶಾಖೆ ಜಮಖಂಡಿ ಬ್ಯಾಂಕಿನಲ್ಲಿ ಹಾಜರುಪಡಿಸಿದಾಗ, ಬ್ಯಾಂಕಿನವರು ದಿನಾಂಕ 04.02.2023 ರಂದು ಸದರಿ ಚೆಕ್ಕನ್ನು

"Exceeds arrangement" ಎಂಬ ಹಿಂಬರಹದೊಂದಿಗೆ ಹಣವನ್ನು ನೀಡದೇ ಮರಳಿ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ- ಸುಳ್ಳು

ಪ್ರಶ್ನೆ 5: ಪ್ರಾಸಾ-1) ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ನಂತರ ದಿನಾಂಕ 02.03.2023 ರಂದು ಚೆಕ್‌ನಲ್ಲಿ ಹೇಳಿರುವಂತಹ ಹಣವನ್ನು ಪಾವತಿ ಮಾಡಲು ತಮ್ಮ ವಕೀಲರ ಮುಖಾಂತರ ನಿಮಗೆ ತಿಳುವಳಿಕೆ ಪತ್ರ (ಲೀಗಲ್ ನೋಟೀಸ್) ನೀಡಿರುತ್ತಾರೆ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ- ಸುಳ್ಳು

ಪ್ರಶ್ನೆ 6: ಪ್ರಾಸಾ-1) ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ಸದರಿ ತಿಳುವಳಿಕೆ ಪತ್ರ (ಲೀಗಲ್ ನೋಟೀಸ್) ನಿಮಗೆ ದಿನಾಂಕ 04.03.2023 ರಂದು ಜಾರಿಯಾಗಿದ್ದು, ತಿಳುವಳಿಕೆ ಪತ್ರ (ಲೀಗಲ್ ನೋಟೀಸ್) ಜಾರಿಯಾದ 15 ದಿನಗಳ ನಂತರವೂ ನೀವು ಹಣವನ್ನು ಪಾವತಿ ಮಾಡಿರುವುದಿಲ್ಲ ಎಂದು ಮತ್ತು ಅವರು ತಮ್ಮ ಹೇಳಿಕೆಯ ಮೂಲಕ ನಿಶಾನೆ ಪಿ.1 ರಿಂದ ನಿಶಾನೆ ಪಿ.5 ರ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ- ಸುಳ್ಳು

ಪ್ರಶ್ನೆ 7: ನಿಮ್ಮ ಪರವಾಗಿ ಸ್ವಇಚ್ಛೆಯಿಂದ ಬೇರೆ ಏನನ್ನಾದರೂ ಹೇಳುವುದು ಇದೆಯೇ ?

ಉತ್ತರಃ- ಇಲ್ಲ.

ಪ್ರಶ್ನೆ 8: ನಿಮ್ಮ ಪರವಾಗಿ ಯಾವುದಾದರೂ ಮೌಖಿಕ ಅಥವಾ ದಾಖಲೆ ಸಾಕ್ಷ್ಯವನ್ನು ಹಾಜರುಪಡಿಸುವಿರಾ ?

ಉತ್ತರಃ- ಸಾಕ್ಷಿ ಮಾಡಿಸುತ್ತೇನೆ.

(ಈ ಮೇಲ್ಕಂಡ ಪ್ರಶ್ನೆಗಳನ್ನು ಆರೋಪಿಗೆ ಓದಿ ಹೇಳಿ ಅರ್ಥೈಸಿದ ನಂತರ, ಆರೋಪಿಯು ನೀಡಿದ ಉತ್ತರಗಳನ್ನು ಇಂದು ದಿನಾಂಕ 20.12.2025 ರಂದು ಈ ಮೇಲಿನಂತೆ ನಮೂದಿಸಿಕೊಳ್ಳಲಾಯಿತು)

ಓ.ಹೇ.ಕೇ. ಸರಿ ಇದೆ.

RAJASHEKHAR Digitally signed by RAJASHEKHAR Date: 2025.12.22 10:43:46 +0530

ಸ್ಥಳಃ- ಜಮಖಂಡಿ.
ದಿನಾಂಕಃ- 20.12.2025

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.